ದಿನಾಂಕ 26-07-2022 ರಂದು ಸಾಕ್ಷಿದಾರರನ್ನು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

: ಮುಂದುವರೆದ ಪಾಟೀ ಸವಾಲುಃ 1, 4 ರಿಂದ 6 ನೇ ಪ್ರತಿವಾದಿ ಪರ ಶ್ರೀ.ಬಿ ಎಸ್ ಎ ವಕೀಲರಿಂದ :

ನನ್ನ ತಂದೆ ಯಾವಾಗ ಸರಕಾರಿ ನೌಕರಿಗೆ ಸೇರಿದರು ಎಂದು ದಿನಾಂಕ ಅಷ್ಟಾಗಿ ಗೊತ್ತಿಲ್ಲ. ನನ್ನ ತಂದೆ ನೌಕರಿಗೆ ಸೇರಿದಾಗ ಅವರಿಗೆ ತಿಂಗಳಿಗೆ ರೂ.50-00 ವೇತನ ಇತ್ತು ಎಂದು ಹೇಳುವುದನ್ನು ಕೇಳಿದ್ದೆ. ನನ್ನ ತಂದೆ ಪ್ರಾಥಮಿಕ ಶಾಲೆಯ ಶಿಕ್ಷಕರಾಗಿ ನೌಕರಿಗೆ ಸೇರಿದ್ದರು. ನನ್ನ ತಂದೆ ಯಾವಾಗ ನಿವೃತ್ತಿ ಹೊಂದಿದರು ಎಂದು ದಿನಾಂಕ ನೆನಪಿಲ್ಲ. ಅವರು ನಿವೃತ್ತಿಯಾದಾಗ ಮಾಸಿಕ ವೇತನ ಸುಮಾರು ರೂ.20,000-00 ಇತ್ತು. ನನ್ನ ತಂದೆಗೆ ಒಟ್ಟು ಆರು ಜನ ಮಕ್ಕಳು. ನನ್ನ ತಂದೆಯ ಕೊನೆಯ ಮಗು ನನ್ನ ತಂಗಿ ಪ್ರತಿಭಾ. ನನ್ನ ತಂಗಿ ಪ್ರತಿಭಾ 1972 ರಲ್ಲಿ ಜನಿಸಿದ್ದಾಳೆ. ನನ್ನ ತಾಯಿ ಹಾಗೂ 6 ಜನ ಮಕ್ಕಳನ್ನು ಸಾಕುವ ಜವಾಬ್ದಾರಿ ನನ್ನ ತಂದೆಯ ಮೇಲಿತ್ತು. ನನ್ನ ತಂದೆ ನೌಕರಿಗೆ ಸೇರಿದಾಗ ಅವರ ಮಾಸಿಕ ವೇತನ ರೂ.35-00 ಇತ್ತು ಎಂದರೆ ಇರಬಹುದು. ನನ್ನ ತಂದೆಗೆ 1966-67 ನೇ ಸಾಲಿನಲ್ಲಿ ಎಷ್ಟು ಸಂಬಳ ಇತ್ತು ಎಂದು ಗೊತ್ತಿಲ್ಲ. ಆ ಸಾಲಿನಲ್ಲಿ

ಅವರ ಮಾಸಿಕ ವೇತನ ರೂ.89-00 ಎಂದರೆ ಇರಬಹುದು. ನಮ್ಮ ಕುಟುಂಬದ ನಿರ್ವಹಣೆಗೆ ರೂ.89-00 ಸಾಕಾಗುತ್ತಿತ್ತು ಹಾಗೂ ಉಳಿತಾಯವೂ ಆಗುತ್ತಿತ್ತು. ಎಷ್ಟು ಎಂದು ಗೊತ್ತಿಲ್ಲ. ನಮ್ಮ ಸಂಪೂರ್ಣ ಕುಟುಂಬದ ನಿರ್ವಹಣೆಗಾಗಿ ಸರಕಾರಿ ವೇತನವಾದ ರೂ.89-00 ಅಷ್ಟಕ್ಕಷ್ಟೇ ಸಾಕಾಗುತ್ತಿತ್ತು, ಯಾವುದೇ ಉಳಿತಾಯ ಆಗುತ್ತಿರಲಿಲ್ಲ ಎಂದರೆ ಸರಿಯಲ್ಲ.

2. ನಿ ಪಿ 28 ರ ದಾಖಲೆಯ ಮೂಲಕ ಖರೀದಿಸಿದ ಆಸ್ತಿಯು ನಾಲ್ಕು ಜನ ಸಹೋದರರು ಕೂಡಿ ಇದ್ದಾಗ ಖರೀದಿಸಿದ ಆಸ್ತಿಯಾಗಿದೆ. ನಿ ಪಿ 28 ರಲ್ಲಿ ಏಕತ್ರ ಘರಾಣೆಯ ಸದಸ್ಯರು ಸಾಮೂಹಿಕವಾಗಿ ಖರೀದಿಸುತ್ತಿದ್ದಾರೆ ಎಂದು ಬರೆದಿಲ್ಲ. ನಿ ಪಿ 28 ರಲ್ಲಿ ಖರೀದಿಸಿದ ಎರಡೂ ಪ್ಲಾಟುಗಳು ನಾಲ್ಕೂ ಜನ ಸಹೋದರರು ಹಣ ವಿನಿಯೋಗಿಸಿ ಸಾಮಾಹಿಕವಾಗಿ ಖರೀದಿಸಿದ ಆಸ್ತಿ ಎಂದರೆ ಸರಿಯಲ್ಲ. ನಿ ಪಿ 28 ರಲ್ಲಿ ಖರೀದಿಸಿದ ಎರಡೂ ಆಸ್ತಿಗಳನ್ನು 2006 ರಲ್ಲಿ ವಾಟ್ನಿ ಮಾಡಿಕೊಂಡಿದ್ದಾರೆ. 2006 ರಲ್ಲಿ ನಿ ಪಿ 28 ರಲ್ಲಿ ಕಾಣಿಸಿದ ಎರಡೂ ಪ್ಲಾಟುಗಳನ್ನು ಹೊರತುಪಡಿಸಿ ಬೇರೆ ಸಾಮೂಹಿಕ ಆಸ್ತಿಗಳು ಸಹ ನಾಲ್ಕೂ ಜನ ಸಹೋದರರರಿಗೆ ಇತ್ತು. ಉಳಿದ ಆಸ್ತಿಗಳು ಬೆಳಗಾಲಪೇಟೆಯಲ್ಲಿರುವ ವಿ ಪಿ ಸಿ ಸಂಖ್ಯೆ 267 ಮತ್ತು 268 ರ ಮನೆಗಳು. ಸಾಮೂಹಿಕ ಮಾಲ್ಕಿಯಲ್ಲಿದ್ದ ಎಲ್ಲಾ ಆಸ್ತಿಗಳನ್ನು 2006 ರಲ್ಲಿ ವಾಟ್ನಿ ಮಾಡಿಕೊಂಡಿದ್ದಾರೆ. ದಿನಾಂಕ 30-4-2006 ರಂದು ನಿ ಪಿ 32 ರ ಪ್ರಕಾರ ಅವರು ಸಾಮೂಹಿಕವಾಗಿ ಇದ್ದ ಎಲ್ಲಾ ಆಸ್ತಿಗಳನ್ನು ಹಂಚಿಕೊಂಡಿದ್ದಾರೆ. ಸದರಿ ಆಸ್ತಿಗಳನ್ನು ಹೊರತುಪಡಿಸಿ ಮನೆತನಕ್ಕೆ ಬೇರೆ ಸಾಮೂಹಿಕ ಆಸ್ತಿಗಳು ಇರಲಿಲ್ಲ ಎಂದರೆ ಹೆಸರಿನಲ್ಲಿ ಇರಲಿಲ್ಲ, 2 ನೇ ಪ್ರತಿವಾದಿಯ ಹೆಸರಿನಲ್ಲಿದ್ದವು. 2 ನೇ ಪ್ರತಿವಾದಿಯ ಹೆಸರಿನಲ್ಲಿ ಮನೆತನದ ಬೇರೆ ಆಸ್ತಿಗಳು ಇತ್ತು ಎಂದು ನಿ ಪಿ 28 ರಲ್ಲ ಬರೆದಿಲ್ಲ. 2006 ರಲ್ಲಿ ಮಾಡಿಕೊಂಡ ವಾಟ್ನಿಯಲ್ಲಿ 2 ನೇ ಪ್ರತಿವಾದಿಯ ಹೆಸರಿನಲ್ಲಿ ಇನ್ನೂ ಆಸ್ತಿಗಳು ಇವೆ ಎಂದು ಬರೆಯಿಸಲು ತೊಂದರೆ ಇರಲಿಲ್ಲ. 2006 ರಲ್ಲಿ ಸಾಮೂಹಿಕವಾಗಿ ಮತ್ತು ಸಾಮೂಹಿಕ ಮನೆತನಕ್ಕೆ ಸಂಬಂಧಿಸಿದ ನಾಲ್ಕು ಮನೆದಳದ ಆಸ್ತಿಗಳನ್ನು ಹೊರತುಪಡಿಸಿ ಬೇರೆ ಯಾವುದೇ ಆಸ್ತಿಗಳು ಇಲ್ಲದೇ ಇದ್ದ ಕಾರಣ ವಾಟ್ನಿಯಲ್ಲಿ ಬರೆದಿಲ್ಲ ಎಂದರೆ ಸರಿಯಲ್ಲ.

3. ನನ್ನ ತಂದೆ, 1 ನೇ ವಾದಿ, 2 ಮತ್ತು 3 ನೇ ಪ್ರತಿವಾದಿಯರು 1966 ರಲ್ಲಿ ತಮ್ಮ ಮನೆತನಕ್ಕೆ ಸೇರಿದ ಎಲ್ಲಾ ಆಸ್ತಿಗಳನ್ನು ವಾಟ್ನಿ ಮಾಡಿಕೊಂಡಿದ್ದಾರೆ ಎಂದರೆ ಸರಿಯಲ್ಲ. ಆ ಕಾರಣಕ್ಕಾಗಿಯೇ ನಿ ಪಿ 32 ರ ದಾಖಲೆಯಲ್ಲಿ ಮನೆತನಕ್ಕೆ ಇನ್ನೂ ಆಸ್ತಿಗಳು ಇವೆ

ಎಂದು ಬರೆದಿಲ್ಲ ಎಂದರೆ ಸರಿ. ನಿ ಪಿ 32 ರ ದಾಖಲೆ ನನ್ನ ಬಳಿಯೇ ಇತ್ತು. ನನ್ನ ತಂದೆಗೆ ವಯಸ್ಸಾಗಿ ಅರಳು ಮರಳಾಗಿದ್ದ ಕಾರಣ ನಿ ಪಿ 32 ರ ದಾಖಲೆ ಹಿಂದೆ ಸಿಕ್ಕಿರಲಿಲ್ಲ. ಸುಮಾರು 10 ವರ್ಷಗಳಿಂದ ನನ್ನ ತಂದೆಗೆ ಅರಳು ಮರಳಾಗಿತ್ತು. ಅಂದರೆ ದಾವೆ ಮಾಡುವ ಪೂರ್ವದಿಂದಲೇ ಅರಳು ಮರಳು ಇತ್ತು. 1 ನೇ ವಾದಿ ನನ್ನ ದೊಡ್ಡಪ್ಪ. ಅವರ ಜಿ ಪಿ ಎ ಹೋಲ್ಡರ ನಾನಾಗಿದ್ದೇನೆ. ಅವರ ಆಸ್ತಿಗಳ ಬಗ್ಗೆಯೂ ನನಗೆ ಮಾಹಿತಿ ಇದೆ. 1 ನೇ ವಾದಿಯ ಹೆಸರಿನಲ್ಲಿ ಬೆಳಗಾಲಪೇಟೆ ಗ್ರಾಮದ ರಿ ಸ ನಂ. 153 ರಲ್ಲಿ 6 ಎಕರೆ 16 ಗುಂಟೆ 1966 ರಿಂದ ಇದೆ ಎಂದರೆ ಸರಿ. ಸದರಿ ಆಸ್ತಿ ಇವತ್ತಿನವರೆಗೂ 1 ನೇ ವಾದಿಯ ವಂಶಸ್ಥರ ಮಾಲ್ಕಿ ಕಬಜಾ ವಹಿವಾಟಿಯಲ್ಲಿದೆ. ಅದಕ್ಕೂ ಪೂರ್ವದಲ್ಲಿ ಸದರಿ ಆಸ್ತಿಯು ನನ್ನ ಅಜ್ಜನಾದ ಬಸವಣ್ಣೆಪ್ಪರವರ ಮಾಲ್ಕಿ ಕಬಜಾದಲ್ಲಿ ಇತ್ತು ಎಂದರೆ ಸರಿ. ಸದರಿ ಆಸ್ತಿಯು ನಿ ಡಿ 1 ರ ದಾಖಲೆಯ ಪ್ರಕಾರ 1966 ರಲ್ಲಿ 1 ನೇ ವಾದಿಯ ಹೆಸರಿನಲ್ಲಿ ದಾಖಲಾಯಿತು ಎಂದರೆ ಸರಿ. 1 ನೇ ವಾದಿಯು ಮೇಲೆ ಹೇಳಿದ 6 ಎಕರೆ 16 ಗುಂಟೆಯಲ್ಲಿ 3 ಎಕರೆ 8 ಗುಂಟೆಯನ್ನು ತನ್ನ ಮೊಮ್ಮಗನಾದ ಅಮಿತ ಹೆಸರಿಗೆ ಭಕ್ಷಿಸ್ ಪತ್ರ ಮಾಡಿಕೊಟ್ಟಿದ್ದಾರೆ ಎಂದರೆ ಸರಿ. ಸಾಕ್ಷಿಗೆ ನೋಂದಾಯಿತ ಭಕ್ಷಿಸ್ ಪತ್ರದ ದೃಢೀಕೃತ ನಕಲನ್ನು ತೋರಿಸಲಾಗಿ ಸಾಕ್ಷಿ ಅದನ್ನು ಗುರುತಿಸಿದ್ದು ನಿ ಡಿ 15 ಎಂದು ಗುರುತಿಸಲಾಯಿತು. ನಿ ಡಿ 15 ರ ದಿನಾಂಕದಂದೇ 1 ನೇ ವಾದಿಯು ಮೇಲೆ ಹೇಳಿದ 6 ಎಕರೆ 16 ಗುಂಟೆಯಲ್ಲಿ ಉಳಿದ 3 ಎಕರೆ 8 ಗುಂಟೆಯನ್ನು ತನ್ನ ಇನ್ನೊಬ್ಬ ಮೊಮ್ಮಗನಾದ ವಿನಯ ಹೆಸರಿಗೆ ನೋಂದಾಯಿತ ಭಕ್ಷಿಸ್ ಪತ್ರದ ಮೂಲಕ ಭಕ್ಷಿಸು ಕೊಟ್ಟಿದ್ದಾರೆ ಎಂದರೆ ಸರಿ. ಸಾಕ್ಷಿಗೆ ನೋಂದಾಯಿತ ಭಕ್ಷಿಸ್ ಪತ್ರದ ದೃಢೀಕೃತ ನಕಲನ್ನು ತೋರಿಸಲಾಗಿ ಸಾಕ್ಷಿ ಅದನ್ನು ಗುರುತಿಸಿದ್ದು ನಿ ಡಿ 16 ಎಂದು ಗುರುತಿಸಲಾಯಿತು.

4. 1 ನೇ ವಾದಿ ಬೆಳಗಾಲಪೇಟೆ ಗ್ರಾಮದ ರಿ ಸ ನಂ. 155/3 ರಲ್ಲಿ 3 ಎಕರೆ 19 ಗುಂಟೆಯನ್ನು ಖರೀದಿಸಿದ್ದಾರೆ ಎಂದರೆ ಸರಿ. ಸದರಿ ಆಸ್ತಿಯನ್ನು 1966 ರ ನಂತರ 1 ನೇ ವಾದಿ ಖರೀದಿಸಿರಬಹುದು. ಸದರಿ ಅಸ್ತಿಯನ್ನು 1 ನೇ ವಾದಿಯು ಒಟ್ಟು ಕುಟುಂಬದ ಸದಸ್ಯನಾಗಿ ಖರೀದಿಸಿದ್ದಾರೆ. ಸದರಿ ಆಸ್ತಿಯನ್ನು 1 ನೇ ವಾದಿ ದಿನಾಂಕ 1-12-2017 ರಂದು ತನ್ನ ಇನ್ನೊಬ್ಬ ಮೊಮ್ಮಗನಾದ ನಂದೀಶ ಹೆಸರಿಗೆ ಭಕ್ಷಿಸ ಮಾಡಿದ್ದಾರೆ ಎಂದರೆ ಸರಿ. ಸಾಕ್ಷಿಗೆ ನೋಂದಾಯಿತ ಭಕ್ಷಿಸ್ ಪತ್ರದ ದೃಢೀಕೃತ ನಕಲನ್ನು ತೋರಿಸಲಾಗಿ ಸಾಕ್ಷಿ ಅದನ್ನು ಗುರುತಿಸಿದ್ದು ನಿ ಡಿ 17 ಎಂದು ಗುರುತಿಸಲಾಯಿತು. ಸದರಿ ಆಸ್ತಿಯನ್ನು ಈ ದಾವೆ ಹಾಕುವ ಪೂರ್ವದಲ್ಲಿ ಖರೀದಿಸಿದ್ದಾರೆ. ಒಟ್ಟು ಕುಟುಂಬದ ಆಸ್ತಿಯಾಗಿದ್ದಲ್ಲಿ

ಬೆಳಗಾಲಪೇಟೆ ಗ್ರಾಮದ ರಿ ಸ ನಂ. **155/3** ರಲ್ಲಿರುವ **3** ಎಕರೆ **19** ಗುಂಟೆಯನ್ನು ದಾವೆಯಲ್ಲಿ ಏಕೆ ಸೇರಿಸಿಲ್ಲ ಎಂದರೆ ಗೊತ್ತಿಲ್ಲ. ನನ್ನ ಅಜ್ಜ ಬದುಕಿದ್ದಾಗ **1966** ರಲ್ಲಿ ನನ್ನ ಅಜ್ಜ ಮತ್ತು ಅವರ ಗಂಡು ಮಕ್ಕಳ ಮಧ್ಯ ಹಿಸ್ಸೆಯಾಗಿ ಅದರ ಪ್ರಕಾರವೇ ನಡೆದುಕೊಂಡು ಬಂದಿದ್ದಾರೆ ಎಂದರೆ ಸರಿಯಲ್ಲ. ಆ ಪ್ರಕಾರವೇ ನಿ ಡಿ **1** ರ ದಾಖಲೆ ಮಂಜೂರಾಗಿದೆ ಎಂದರೆ ಸರಿಯಲ್ಲ. ಸದರಿ ದಾಖಲೆಯ ಪ್ರಕಾರವೇ ನಾವೆಲ್ಲರೂ ಮುಂದೆ ನಡೆದುಕೊಂಡು ಬಂದಿದ್ದೇವೆ ಎಂದರೆ ಸರಿಯಲ್ಲ. ಆ ಕಾರಣದಿಂದಾಗಿ ದಾವಾ ಶೆಡ್ಯೂಲ್ **2**(ಬಿ) ಯಲ್ಲಿ ಕಾಣಿಸಿದ ನನ್ನ ಅಜ್ಜನ ಹೆಸರಿನಲ್ಲಿರುವ ಆಸ್ತಿಯನ್ನು ಹೊರತುಪಡಿಸಿ ಉಳಿದ ಎಲ್ಲಾ ಆಸ್ತಿಗಳು **2** ನೇ ಪ್ರತಿವಾದಿಯ ಸ್ವಯಾರ್ಜಿತ ಆಸ್ತಿಗಳು ಎಂದರೆ ಸರಿಯಲ್ಲ. ಸದರಿ ಆಸ್ತಿಗಳಲ್ಲಿ ಯಾವುದೇ ಹಿಸ್ಸೆ ಹಕ್ಕು ಇಲ್ಲ ಎಂದರೆ ಸರಿಯಲ್ಲ. ಈ ದಾವೆಯಲ್ಲಿ **1** ನೇ ವಾದಿಯ ಹೆಸರಿನಲ್ಲಿರುವ, ನನ್ನ ತಂದೆಯ ಹೆಸರಿನಲ್ಲಿರುವ ಹಾಗೂ **3** ನೇ ಪ್ರತಿವಾದಿಯ ಹೆಸರಿನಲ್ಲಿರುವ ಯಾವುದೇ ಆಸ್ತಿಗಳನ್ನು ಸೇರ್ಪಡೆ ಮಾಡಿಲ್ಲ ಎಂದರೆ ಸರಿ. ಅವರೆಲ್ಲರೂ ಜಮೀನು, ಮನೆ ಹೊಂದಿದ್ದಾರೆ. ಬೆಳಗಾಲಪೇಟೆ, ಆಲದಕಟ್ಟಿ, ಚಂದ್ರಗಿರಿ, ಬೆಳವತ್ತಿ ಗ್ರಾಮಗಳಲ್ಲಿ ಅವರಿಗೆ ಜಮೀನುಗಳು ಇವೆ. **2** ನೇ ಪ್ರತಿವಾದಿ ಮತ್ತು ಅವರ ಮಕ್ಕಳಿಗೆ ತೊಂದರೆ ಕೊಡಬೇಕೆಂದು ಸುಳ್ಳು ದಾವೆ ಮಾಡಿದ್ದೇವೆ ಎಂದರೆ ಸರಿಯಲ್ಲ.

<u>: ಮುಂದುವರೆದ ಪಾಟೀ ಸವಾಲುಃ **3** ನೇ ಪ್ರತಿವಾದಿ ಪರ ಶ್ರೀ.ಎಸ್ ಜಿ ವಿ ವಕೀಲರಿಂದ :</u>

( **3** ನೇ ಪ್ರತಿವಾದಿ ಮತ್ತು ಅವರ ವಕೀಲರನ್ನು ಕರೆಯಲಾಯಿತು. ಗೈರು ಹಾಜರಿ, ಆದ್ದರಿಂದ **3** ನೇ ಪ್ರತಿವಾದಿ ಪರ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು)

<u>ಮುಂದುವರೆದ ಪಾಟೀ ಸವಾಲು **2** ನೇ ಪ್ರತಿವಾದಿ ಪರ ಶ್ರೀ. ಜಿ ಆರ್ ಎ ವಕೀಲರಿಂದಃ</u>

(**1** ಮತ್ತು **4** ರಿಂದ **6** ನೇ ಪ್ರತಿವಾದಿಯರ ಪರ ಮಾಡಿದ ಮುಂದುವರೆದ ಪಾಟೀ ಸವಾಲನ್ನೆ ಅಳವಡಿಸಿಕೊಳ್ಳುವುದಾಗಿ ನುಡಿಯುತ್ತಾರೆ)

: ಮರುವಿಚಾರಣೆ : ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ನ. ಸ. ಓ. ಹೇ. ಕೆ ಸರಿ ಇದೆ
ಎಂದು ಒಪ್ಪಿರುತ್ತಾರೆ.

**Sd/-**
ಹಿರಿಯ ಸಿವಿಲ್ ನ್ಯಾಯಾಧೀಶರು
ಹಾನಗಲ್